ಕವಿತೆ




## ಸಮುದ್ಯತಾ ವೆಂಕಟ್ರಾಮು

ಕಲೆ: ರೂಪಶ್ರೀ ಕಲ್ಲಿಗನೂರು


# ಕೂಡಿ ಕಳೆಯುವ ಲೆಕ್ಕ

ಕಳೆಯಿತೆಂದಿರೋ ಕಳೆಯಿತು
ಕೂಡಿತೆಂದಿರೋ ಕೂಡಿತು
ಅಲ್ಲಿ ಕಳೆದಿದ್ದು ಇಲ್ಲಿ ಕೂಡಿ
ಇಲ್ಲಿ ಕೂಡಿದ್ದು ಅಲ್ಲಿ ಕಳೆದು
ಶೇಷವೆಲ್ಲೋ!

ನೀರಿನಲ್ಲಿ ಕಳೆದು ಬಾನು ಸೇರಿ
ಬಾನು ಸೇರಿದ್ದು ಮಣ್ಣಿಗಿಳಿದು
ಸೂಜಿ ಸೇರಿದ ದಾರ
ಹತ್ತಿಯೊಳು ಹತ್ತಿಳಿದು ಕಳೆದು
ಕೂಸಿಗೆ ಕುಂಚಿಗೆಯಾದಂತೆ
ಹರಿದ ಹೊಕ್ಕಳಬಳ್ಳಿ
ಮತ್ತೆ ಮೊಲೆ ಹಾಲರಸಿ
ತಾಯಿಬಳಿ ಬಂದಂತೆ

ಲಯವೆ ಜನನದ ಬೀಜ
ಮರಣ ಮರುಹುಟ್ಟು
ಕೂಡಿ ಕಳೆಯುವ ಲೆಕ್ಕ
ಬದುಕಿನಾಟದ ಗುಟ್ಟು




Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,

© All rights reserved. Reproduction in whole or in part without permission is prohibited.
RNI No 17129/68